ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯರವರು, ವಾಟಾಳ್‌ನಾಗರಾಜ್ ಅವರು ಮತ್ತು ದೇಶಪಾಂಡೆಯವರು ಹೇಳಿದ ಹಾಗೆ, ನಂಜಪ್ಪನವರು, ಈಶ್ವರಪ್ಪನವರು ಕೂಡ ಹೇಳಿದ್ದಾರೆ. ಹನುಮೇಗೌಡರು ಕೂಡ ಅಲ್ಲಿದ್ದರು . ನಿನ್ನೆ ಕೂಡ ಅಂಗನವಾಡಿ ಕಾರ್ಯಕರ್ತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ನಾನೂ ಕೂಡ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಅವರಿಗೆ ಸರಕಾರದವರು ಯಾವ ರೀತಿಯಲ್ಲಿ ಪರಿಹಾರವನ್ನು ಕೊಡಬೇಕೆಂದು ಹೇಳಿದ್ದೇನೆ. ಇನ್ನೂ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಇನ್ನೂ ಹೆಚ್ಚಿನ ಪರಿಹಾರ ಸಿಗಬಹುದೆಂದು ಅಲ್ಲಿಗೆ ಹೋಗಿರಬಹುದು. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಅಂಗನವಾಡಿ ಕಾರ್ಯಕರ್ತರು ಕಬ್ಬನ್‌ಪಾರ್ಕ್‌ನಲ್ಲಿ ಕುಳಿತು ಧರಣಿ ಮಾಡುತ್ತಿರುವುದರ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಶಿವಮೊಗ್ಗ, ಬೆಳಗಾಂ, ಬಾಗಲಕೋಟೆ ಮುಂತಾದ ಕಡೆಗಳಿಂದ ಬಂದ ಜನರು ತಮಗೆ ಪೋಲೀಸರಿಂದ ಆದ ಹಿಂಸೆಯ ಬಗ್ಗೆ ಹೇಳಿದ್ದಾರೆ. ಹಾಗೆ ಆಗಬಾರದು, ಪ್ರಜಾಪ್ರಭುತ್ವದಲ್ಲಿ ಅವರಿಗೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವ ಒಂದು ಅವಕಾಶ ಇದ್ದು ಅದನ್ನು ಅವರಿಗೆ ಕೊಡಲೇಬೇಕು. ಹಾಗಾಗಿ ಅವರನ್ನು ತಡೆಗಟ್ಟಬಾರದು ಎಂಬ ಮಾತನ್ನು ಕೂಡ ಹೇಳಿದ್ದೇನೆ. ಇವೊತ್ತಿನ ಘಟನೆ ಬಗ್ಗೆ ತಾವುಗಳು ಏನು ಪ್ರಸ್ತಾಪ ಮಾಡಿದ್ದೀರಿ. ಈಗಲೇ ನಾನು ಪೋಲೀಸ್ ಕಮಿಷನರ್ ಜೊತೆಯಲ್ಲಿ ಮಾತನಾಡುತ್ತೇನೆ. ವಿವರಗಳನ್ನು ಪಡೆದು, ಎಲ್ಲಿ ಲಾಠಿಚಾರ್ಜ್‌ನಿಂದ ಪೆಟ್ಟು ಆಗಿ ಚಿಕಿತ್ಸೆ ಬೇಕಾಗಿದೆ ಅದನ್ನು ಕೂಡ ಮಾಡಿಸಿಕೊಡುತ್ತೇನೆ. ಎಲ್ಲಿಯಾದರೂ ಕೂಡ ಸ್ಟೇಶನ್‌ನಲ್ಲಿ ಬಂಧಿತರಿದ್ದರೆ ಅವರನ್ನು ಬಿಡುಗಡೆ ಮಾಡಿಸುತ್ತೇನೆ. ಏಪ್ರಿಲ್ ತಿಂಗಳಿನಲ್ಲಿ ಮುಖ್ಯಮಂತ್ರಿಗಳು ಇದರ ಬಗ್ಗೆ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದಾರೆ, ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ನೀರಿನ ಸಮಸ್ಯೆ ಬಗ್ಗೆ ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದರು. ನೀರಿನ ಸಮಸ್ಯೆಯು ಬಹಳ ಗಂಭೀರವಾಗಿದೆ.

ಅಧ್ಯಕ್ಷರು : ತಾವುಗಳೆಲ್ಲರೂ ಕೊಟ್ಟ ಕಾಗದಗಳನ್ನು ನಾನು ಇಟ್ಟುಕೊಂಡಿದ್ದೇನೆ. ನಾನು ಅವಕಾಶ ಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ವಿಷಯ : ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅರೆಕಾಲಿಕ ಉಪನ್ಯಾಸಕರ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ಅರೆಕಾಲಿಕ ಉಪನ್ಯಾಸಕರ ಬಗ್ಗೆ ಮಾನ್ಯ ದೇಶಪಾಂಡೆಯವರು, ಯಡಿಯೂರಪ್ಪನವರು, ಈಶ್ವರಪ್ಪನವರು ಕೊಟ್ಟಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಕರ್ನಾಟಕ ರಾಜ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರುಗಳು 1700 ಜನರಿದ್ದಾರೆ. ನಮಗೆ ಜಾಬ್ ಸೆಕ್ಯುರಿಟಿ ಇಲ್ಲ, ಸಂಬಳ ಸಾರಿಗೆಗಳು ಇಲ್ಲ, ನಮ್ಮನ್ನು ಖಾಯಂ ಮಾಡಿ ಎಂದು ನಾಲ್ಕು ದಿವಸಗಳಿಂದ ಕಬ್ಬನ್‌ಪಾರ್ಕ್‌ನಲ್ಲಿ ಆಮರಣಾಂತಿಕ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅವರಲ್ಲಿ

ಅನೇಕರು ಆಸ್ಪತ್ರೆಗೆ ಸೇರಿದ್ದಾರೆ. ಈಗಾಗಲೇ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಈ ರೀತಿಯಲ್ಲಿ ಅರೆಕಾಲಿಕ ಉಪನ್ಯಾಸಕರುಗಳನ್ನು ಖಾಯಂ ಮಾಡಿದ್ದಾರೆ. ರಾಜ್ಯದಾದ್ಯಂತ ಉಪನ್ಯಾಸಕರುಗಳ ಕೊರತೆ ಇರುವ ಸಂದರ್ಭದಲ್ಲಿ ಪರೀಕ್ಷಾ ಕಾಲದಲ್ಲಿ ಈ ಉಪನ್ಯಾಸಕರುಗಳು ಉಪವಾಸ ಸತ್ಯಾಗ್ರಹದಲ್ಲಿ ತೊಡಗಿರುವುದರಿಂದ ಶಿಕ್ಷಕರು ಇಲ್ಲದೆ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತದೆ. ಇದಕ್ಕೆ ಒಂದು ಪರಿಹಾರವನ್ನು ಹುಡುಕಬೇಕಾಗುತ್ತದೆ. ಆದ್ದರಿಂದ ತಾವುಗಳು ಅವರಿಗೆ ಜಾಬ್ ಸೆಕ್ಯುರಿಟಿ ಕೊಡಬೇಕು. ಅವರಿಗೆ ಒಂದು ಸಾವಿರ ರೂಪಾಯಿಗಳನ್ನು ತತ್‌ಕ್ಷಣ ಕೊಡುವಂಥ ವ್ಯವಸ್ಥೆಯನ್ನು ಮಾಡಿ. ಖಾಯಂ ಮಾಡುವ ವಿಚಾರದಲ್ಲಿ ಬೇರೆ ರಾಜ್ಯಗಳಲ್ಲಿ ಯಾವ ರೀತಿಯಲ್ಲಿ ಮಾಡಿದ್ದಾರೆ ಎಂಬುದನ್ನು ತರಿಸಿಕೊಂಡು ಆ ಪ್ರಕಾರವಾಗಿ ಮಾಡಬಹುದು. ಅವರು ಕಳೆದ ಅನೇಕ ವರ್ಷಗಳಿಂದ ಬರುತ್ತಾ ಇದ್ದಾರೆ. ಸದನದಲ್ಲಿಯೂ ಅವರಿಗೆ ಆಶ್ವಾಸನೆಗಳನ್ನು ಕೊಡುತ್ತಾ ಇದ್ದೀರಿ, ಖಾಯಂ ಆದವರಿಗೆ 6000 ಕೊಟ್ಟರೆ ಇವರಿಗೆ 600 ಕೊಟ್ಟು ಅಷ್ಟೇ ದುಡಿಸಿಕೊಳ್ಳುತ್ತಿದ್ದೀರಿ. ಅವರ ಮನಃಸ್ಥಿತಿಯು ಸರಿಯಾಗಿಲ್ಲವಾದಲ್ಲಿ ಅವರು ಪಾಠವನ್ನು ಹೇಗೆ ಮಾಡಬಹುದು? ಆದ್ದರಿಂದ ಯಾವುದೇ ಕಾರಣಕ್ಕಾಗಿಯೂ ಅವರ ಉದ್ಯೋಗಕ್ಕೆ ತೊಂದರೆಯಾಗುವುದಿಲ್ಲ ಎಂಬ ಭರವಸೆಯನ್ನು ಕೊಡಬೇಕು. 600 ರಿಂದ 1000 ರೂ.ಗಳಿಗೆ ಏರಿಸುವುದು ಮತ್ತು ಆಮರಣ ಉಪವಾಸವನ್ನು ನಿಲ್ಲಿಸುವಂಥ ಮತ್ತು ನ್ಯಾಯ ಒದಗಿಸಿಕೊಡುವಂಥ ಒಂದು ವಿಶೇಷ ಪ್ರಯತ್ನವನ್ನು ಮಾಡುವ ಬಗ್ಗೆ ಗಮನಕೊಡಬೇಕು ಮತ್ತು ಆ ಒಂದು ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಯಡಿಯೂರಪ್ಪನವರು ಹೇಳಿದ ವಿಚಾರಗಳು ನಿಜವಾಗಿವೆ. ಅರೆಕಾಲಿಕ ಉಪನ್ಯಾಸಕರುಗಳು ಏನಿದ್ದಾರೆ, ಅವರ ಅವಶ್ಯಕತೆ ಇದೆ ಎಂದು ಸರಕಾರದವರು ತೆಗೆದುಕೊಂಡಿದ್ದಾರೆ. ಇಲ್ಲವಾದಲ್ಲಿ ಅವರ ನೇಮಕ ಮಾಡಿಕೊಳ್ಳುತ್ತಿರಲಿಲ್ಲ. ಹಾಗಾದರೆ ಅವರನ್ನು ಖಾಯಂಗೊಳಿಸಲು ನಿಮಗೆ ಇರುವ ಸಮಸ್ಯೆಗಳಾದರೂ ಏನು? ಕಳೆದ ಐದು ದಿವಸದಿಂದ ಅವರು ಆಮರಣ ಉಪವಾಸ ಮಾಡುತ್ತಿದ್ದಾರೆ. ಅವರಲ್ಲಿ ಈಗಾಗಲೇ ಏಳು ಜನ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಾರೆ. ಸರ್ಕಾರದ ವತಿಯಿಂದ ಮಂತ್ರಿಗಳು ಭೇಟಿಯಾಗಿ ಬಂದಿದ್ದರೂ ಅವರ ಸಮಸ್ಯೆ ಬಗೆಹರಿಸುವ ಕಡೆ ಏನೂ ಕ್ರಮ ಕೈಗೊಂಡಿಲ್ಲ. ಇದರ ಬಗ್ಗೆ ನಾನು ಬಹಳ ಆಶ್ಚರ್ಯ ಪಡುತ್ತಿದ್ದೇನೆ. ಒಬ್ಬ ಲೆಕ್ಚರರ್ ಆದವನು ಸರಿಯಾಗಿ ಪಾಠ ಹೇಳಬೇಕಾದರೆ ಅದಕ್ಕೆ there should be proper atmosphere. ಸರಿಯಾದ ವಾತಾವರಣ ಇರಬೇಕಾಗುತ್ತದೆ ಅವರ ಮನಃಸ್ಥಿತಿ ಸರಿ ಇರಬೇಕಾಗುತ್ತದೆ. ನಮ್ಮ ದೇಶದ ಯುವಕರ ಭವಿಷ್ಯ ಅವರ ಕೈಲಿದೆ. ಹಾಗಾಗಿ ಪ್ರಾಧಾನ್ಯತೆ ಮೇಲೆ ಅವರ ಸಮಸ್ಯೆಗಳನ್ನು ಸರ್ಕಾರ ಬಗೆಹರಿಸಬೇಕಾಗುತ್ತದೆ. 600ರೂ. ಕೊಡುತ್ತಿರುವುದನ್ನು ಕನಿಷ್ಟ ಒಂದು ಸಾವಿರ ಮಾಡಬೇಕಾಗುತ್ತದೆ. ಮತ್ತು ಮುಂದಿನ ವರ್ಷದಿಂದ ಬೇರೆಯವರನ್ನು ತೆಗೆದುಕೊಳ್ಳುವ ಬದಲು ತಾವು ಇವರನ್ನೇ ಉಪಯೋಗ ಮಾಡಿಕೊಳ್ಳಬಹುದು. ಸರ್ಕಾರ ಟರ್ಮಿನೇಟ್ ಮಾಡುತ್ತದೆ ಎಂದು ಹೇಳುತ್ತಿದ್ದಾರಂತೆ. ಹಾಗೆ ಮಾಡಿದರೆ ಬಹಳ ಅನ್ಯಾಯವಾಗಬಹುದು. ಏಕೆಂದರೆ ಎಷ್ಟೋ ಜೂನಿಯರ್ ಕಾಲೇಜುಗಳಲ್ಲಿ ಲೆಕ್ಚರರ್ಸ್ ಇಲ್ಲ, ಇವರನ್ನೂ ಟರ್ಮಿನೇಟ್ ಮಾಡಿದರೆ ಅಲ್ಲಿ ವಿದ್ಯಾರ್ಥಿಗಳಿಗೆ ಕಲಿಸುವವರು ಯಾರು? ಹಾಗಾಗಿ ಇವರನ್ನೇ ಖಾಯಂ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇವರಿಗೆ ಸಂಬಳ ಹೆಚ್ಚು ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಸರ್ಕಾರ ಇವರ ಬಗ್ಗೆ ತನ್ನ ಸ್ಪಷ್ಟ ನಿಲುವೇನು ಎಂದು ಇವತ್ತೇ ಸದನದಲ್ಲಿ ಹೇಳಬೇಕು. ಅವರನ್ನು ಕರೆಯಿಸಿ ಮಾತನಾಡಿ ಈ ಸಮಸ್ಯೆಯನ್ನು ಬಗೆ ಹರಿಸಬೇಕು. ಈಗಾಗಲೇ

ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಈ ಸಮಸ್ಯೆಯನ್ನು ಅವರು ಬಗೆಹರಿಸಿದ್ದಾರೆ. ಅವರು ಯಾವ ಪ್ಯಾಟರ್ನ್ ಮೇಲೆ ಬಗೆಹರಿಸಿದ್ದಾರೆ. ಅದನ್ನು ಅನುಸರಿಸಿ ತಕ್ಷಣ ತಾವು ಇದನ್ನು ಬಗೆಹರಿಸಬೇಕು. ಯಾರಿಗೂ ತಾವು ಟರ್ಮಿನೇಟ್ ಮಾಡಬಾರದು. ರೆಗ್ಯುಲರೈಸ್ ಮಾಡಬೇಕು ಎಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇವರು ಪರೀಕ್ಷೆತನಕ ಕೆಲಸ ಮಾಡುತ್ತಾರೆ. ಮುಂದಿನ ವರ್ಷ ಪ್ರಾರಂಭವಾಗುವ ತನಕ ಅವರಿಗೆ ಉದ್ಯೋಗವೂ ಇಲ್ಲ ಸಂಬಳವೂ ಇಲ್ಲ, ಎಷ್ಟು ಅನ್ಯಾಯವಾಗುತ್ತದೆ ಅಂದರೆ ಮತ್ತೆ ಮುಂದಿನ ವರ್ಷ ಇವರಿಗೆ ಉದ್ಯೋಗ ಕನ್‌ಫರ್ಮ್ ಇಲ್ಲ. ಜಾಬ್ ಸೆಕ್ಯುರಿಟಿಯೇ ಇಲ್ಲ. ಈ ರೀತಿ 1700 ಜನ ಕೆಲಸ ಮಾಡುತ್ತಿದ್ದಾರೆ. ಅನೇಕರಿಗೆ ಮೂರು ನಾಲ್ಕು ವರ್ಷವಾಗಿದೆ. ಅನೇಕರಿಗೆ ಏಜ್‌ಬಾರ್ ಆಗುತ್ತಿದೆ. ಆದ್ದರಿಂದ ಇದೆಲ್ಲ ಸರ್ಕಾರಕ್ಕೆ ಗೊತ್ತಿದೆ. ಮೊದಲನೆಯದಾಗಿ ಯಾರನ್ನು ತೆಗೆದುಕೊಳ್ಳುತ್ತಿದ್ದಾರೋ ಅವರನ್ನೇ ಮುಂದುವರಿಸಬೇಕು, ಮುಂದಿನ ವರ್ಷಕ್ಕೂ ಕೂಡ. ಎರಡನೆಯದಾಗಿ ರಜೆ ಪಿರಿಯಡ್ ಏನು ಬರುತ್ತದೆ, ಆ ಸಮಯಕ್ಕೂ ಸಂಬಳ ಕೊಡಬೇಕು. ಮೂರನೆಯದಾಗಿ ಅವರನ್ನು ಪರ್ಮನೆಂಟ್ ಮಾಡಿಕೊಳ್ಳಬೇಕು. ಬೇರೆ ರಾಜ್ಯಗಳಲ್ಲೆಲ್ಲಾ ಮಾಡಿದ್ದಾರೆ. ನಮ್ಮ ರಾಜ್ಯದ್ದೇನೂ ವಿಶೇಷ ಅಲ್ಲ, ಅವರು ಕೇಳುತ್ತಿರುವುದು 4000 - 5000 ರೂ. ಕೊಡಿ ಎಂದು ಕೇಳುತ್ತಿಲ್ಲ. ಅವರು ಕೇಳುತ್ತಿರುವುದೇ ರೂ. 1000 /- ಕೊಡಿ ಎಂದು. ಒಂದು ಸಾವಿರ ಇಲ್ಲದೆ ಹೇಗೆ ಸ್ವಾಮಿ ಜೀವನ ಮಾಡುವುದಕ್ಕಾಗುತ್ತದೆ. ಮೊದಲು ಜಾಬ್ ಸೆಕ್ಯುರಿಟಿ ಕೊಡಿ, ಮತ್ತು ಏನು ರಜೆ ಪೀರಿಯಡ್‌ಗೆ ಸಹ ಸಂಬಳ ಕೊಡಿ, ಒಂದು ಸಾವಿರ ರೂ. ಹಣವು ಕನಿಷ್ಟ ಆದರೂ ಕೊಡಿ ಅಂತ ಕೇಳುತ್ತಿದ್ದಾರೆ. ಆಮರಣಾಂತ ಕುಳಿತಿರುವವರಲ್ಲಿ 7 ಜನ ಆಸ್ಪತ್ರೆ ಸೇರಿದ್ದಾರೆ. ಸರ್ಕಾರ ತಾತ್ಸಾರ ಮಾಡಿದರೆ ಎಷ್ಟು ಜನ ಆಸ್ಪತ್ರೆ ಸೇರುತ್ತಾರೋ ಎಷ್ಟು ಜನ ಸಾಯುತ್ತಾರೋ ಗೊತ್ತಿಲ್ಲ ಮತ್ತೆ ಅವರಷ್ಟೂ ಜನಕ್ಕೆ ಇವರೇ ಜವಾಬ್ದಾರರಾಗಬೇಕಾಗುತ್ತದೆ. ತಕ್ಷಣ ಈ ದಿಕ್ಕಿನಲ್ಲಿ ಸರ್ಕಾರ ಗಮನಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಅರೆಕಾಲಿಕ ಉಪನ್ಯಾಸಕರನ್ನು ಯಾವುದೇ ಸಂದರ್ಭದಲ್ಲಿ ತೆಗೆಯುವ ಕೆಲಸಕ್ಕೆ ಕೈಹಾಕಬಾರದು. ವಯಸ್ಸು ಮತ್ತು ಅನುಭವದ ಆಧಾರದ ಮೇಲೆ ಅವರನ್ನು ಖಾಯಂ ಮಾಡುವ ಬಗ್ಗೆ ಸರ್ಕಾರ ತೀರ್ಮಾನಿಸಬೇಕು. ಈಗಿರುವಂತೆ ರಜೆ ಅವಧಿಗೆ ಅವರು ಸಂಬಳ ಕೊಡುತ್ತಿಲ್ಲ. ಈ ರಜೆ ಅವಧಿಯನ್ನು ಪರಿಗಣಿಸಿ ಅವರಿಗೆ ವೇತನ ಕೊಡಬೇಕು. ಮತ್ತು ಖಾಯಂ ಉಪನ್ಯಾಸಕರು ಏನು ಕೆಲಸ ಮಾಡುತ್ತಿದ್ದಾರೆ ಅಷ್ಟೇ ಕೆಲಸ ಅರೆಕಾಲಿಕ ಉಪನ್ಯಾಸಕರೂ ಮಾಡುತ್ತಿದ್ದಾರೆ. ಅವರಿಗೆ ಬೇರೆ ಇವರಿಗೆ ಬೇರೆ ಮಾಡುವ ವ್ಯವಸ್ಥೆಯನ್ನು ತಪ್ಪಿಸಿ ಇವರಿಗೆ ಕೂಡಲೇ ಖಾಯಂ ಮಾಡುವ ವ್ಯವಸ್ಥೆ ಸರ್ಕಾರ ಕೈಗೊಳ್ಳಬೇಕು. ಅಲ್ಲಿಯವರಿಗೆ ಅವರೇನು ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರನ್ನು ಕರೆಸಿ ಸರ್ಕಾರ ಮಾತುಕತೆ ನಡೆಸಬೇಕು. ಈ ಕೂಡಲೇ ಬೇಕಾದರೆ ಒಂದು ಸಮಿತಿ ನೇಮಕ ಮಾಡಿ ಇವರನ್ನು ಖಾಯಂ ಮಾಡುವ ಬಗ್ಗೆ ಒಂದು ವಾರದಲ್ಲಿ ವರದಿಯನ್ನು ತರಿಸಿಕೊಂಡು ಖಾಯಂ ಮಾಡುವ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಅಧ್ಯಕ್ಷರೇ, ಪಾಪ ಅವರು ಅರೆಕಾಲಿಕ ಶಿಕ್ಷಕರು, ವಾಸ್ತವವಾಗಿ ಪರೀಕ್ಷೆ ಹತ್ತಿರ ಆಗುತ್ತಿದೆ, ಅವರು ಅಲ್ಲಿಗೆ ಹೋಗಿ ಪಾಠ ಮಾಡಬೇಕು.ಈಗ'

ಬಂದಿದ್ದಾರೆ. ಆದರೆ, ಮುಖ್ಯ ಮಂತ್ರಿಗಳು ಅವರಿಗೆ ಬೆದರಿಕೆ ಹಾಕಿದ್ದಾರೆ. ನೀವು ಇಲ್ಲಿಂದ ತಕ್ಷಣ ಎದ್ದು ಹೋಗಬೇಕು, ಇಲ್ಲದಿದ್ದರೆ ನಿಮ್ಮನ್ನೆಲ್ಲಾ ತೆಗೆದುಬಿಡುತ್ತೇವೆ. ಆ ಮಕ್ಕಳ ಗತಿ ಏನಾಗಬೇಕು? ಇವತ್ತು ಅವರು ಎಲ್ಲಿ ಪಾಠ ಮಾಡುತ್ತಿದ್ದಾರೆ? ಮಾರ್ಚ್, ಏಪ್ರಿಲ್‌ನಲ್ಲಿ ಪರೀಕ್ಷೆಯಾಗಬೇಕು. ಆದರಿಂದಾಗಿ ಪ್ರಜಾಪ್ರಭುತ್ವದ ನೀತಿಗೆ ವಿರುದ್ಧವಾಗಿರತಕ್ಕಂಥ ಈ ಬೆದರಿಕೆಗಳಿಂದ ಏನೂ ಉಪಯೋಗವಾಗುವುದಿಲ್ಲ. ತಾವು ದಯವಿಟ್ಟು ಅವರನ್ನು ಕರೆಯಿಸಿ ಮಾತನಾಡಿ ಅವರ ಸಮಸ್ಯೆಯನ್ನು ಪರಿಶೀಲನೆ ಮಾಡುವ ಒಂದು ಭರವಸೆಯನ್ನು ಅವರಿಗೆ ಕೊಡಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಇದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಅವರು ಉಪವಾಸ ಮಾಡಿ ಆಸ್ಪತ್ರೆಯಲ್ಲಿ ಸಾಯುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ಸದನದಲ್ಲಿ ಮಂತ್ರಿಗಳೂ ಇರುವುದಿಲ್ಲ. ತಾವು ಅದಕ್ಕೆ ಉತ್ತರ ಕೊಡುವುದಿಲ್ಲ. ಎಲ್ಲಿಗೆ ಹೋಗಬೇಕು ಸ್ವಾಮಿ ನಾವು.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತನಾಡುತ್ತೇನೆ ಎಂದು ಹೇಳುವುದಕ್ಕಾಗುವುದಿಲ್ಲವೇ? ಸಂಬಂಧಪಟ್ಟ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಅದರ ಬಗ್ಗೆ ಅವರಿಗೆ ಭಿನ್ನಾಭಿಪ್ರಾಯ ಇಲ್ಲ. ಆದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ ಎಂದರೆ ಕನಿಷ್ಟ ಪಕ್ಷ ಅವರನ್ನು ಕರೆಯಿಸಿ ಮಾತನಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲವೇ? ನಾವೇನು ಇಲ್ಲಿಯೇ ತಕ್ಷಣ ಇದಕ್ಕೆ ಒಂದು ರಿಸಲ್ಟ್ ಕೊಡಿರಿ ಎಂದು ಹೇಳಿಲ್ಲ. ಕೊನೇ ಪಕ್ಷ ಅವರನ್ನು ಕರೆಯಿಸಿ ನಾವು ಮಾತನಾಡುತ್ತೇವೆ ಎಂದು ಅಷ್ಟೇ ಹೇಳಬಹುದಲ್ಲ.

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ವಿಚಾರ ಈಗಾಗಲೇ ಈ ಸಭೆಯಲ್ಲಿ ಚರ್ಚೆಗೆ ಬಂದು ಮುಖ್ಯಮಂತ್ರಿಗಳು ಇದ್ದು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಇಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಕೊಟ್ಟಿದ್ದಾರೆ. ಅಲ್ಲಿ ಕುಳಿತುಕೊಂಡಿರತಕ್ಕಂಥವರೆಲ್ಲ ಏಳಬೇಕು, ಅವರ ಸಮಸ್ಯೆಯನ್ನು ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಅದು ಹೈಸ್ಕೂಲ್‌ದು. ಇದು ಜೂನಿಯರ್ ಕಾಲೇಜು

ಲೆಕ್ಚರರ್ಸ್. ಈಗ ಪ್ರಸ್ತಾಪ ಆಗುತ್ತಿದ್ದುದು ಕಾಲೇಜು ಲೆಕ್ಚರರ್ಸ್. ಇದರ ಹಿಂದೆ ಆಗಿದುದ್ದು ಹೈಸ್ಕೂಲ್ ಟೀಚರ್ಸ್. ಮಾನ್ಯ ಲಮಾಣಿಯವರು ಇದಕ್ಕೆ ಉತ್ತರವನ್ನು ಕೊಟ್ಟರು. ಸಮಸ್ಯೆಗಳು ಬೇರೆ ಬೇರೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಹೈಸ್ಕೂಲ್‌ಗೆ ಹೇಳಿದ್ದುದು ಇದಕ್ಕೂ ಅನ್ವಯಿಸುತ್ತದೆ. ಅವರು ಬಂದು ಅದರ ವಿಷಯವನ್ನು ಹೇಳಬೇಕು. ನನಗೇನೂ ಗೊತ್ತಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ಕ್ಯಾಬಿನೆಟ್ ಮಂತ್ರಿಗಳು ಮಂತ್ರಿಯೇ, ಸ್ಟೇಟ್ ಮಂತ್ರಿಗಳು ಮಂತ್ರಿಯೇ, ಎರಡು ಬೇರೆ ಬೇರೆ. ಅವರು ಉಪವಾಸದಿಂದ ಸಾಯುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನವನ್ನು ಕೊಡಬೇಕಾಗುತ್ತದೆ. ಅನೇಕರು ಆಸ್ಪತ್ರೆಯಲ್ಲಿದ್ದಾರೆ. ಇವರು ಬೇಜವಾಬ್ದಾರಿ ಉತ್ತರವನ್ನು ಕೊಟ್ಟರೆ ನಾವು ಕೇಳುವುದಕ್ಕೆ ತಯಾರಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಒಂದು ಪ್ರಶ್ನೆ ಏನೆಂದರೆ ಹೋದ ಸಲ ಇದೇ ರೀತಿ ಅವರು ಕಬ್ಬನ್‌ಪಾರ್ಕ್‌ನಲ್ಲಿ ಉಪವಾಸ ಮಾಡಿದಾಗ ನಾವೆಲ್ಲ ಹೋಗಿ ಅವರಿಗೆಲ್ಲ ಆಶ್ವಾಸನೆ ಕೊಟ್ಟು, ಜೊತೆಗೆ ಮಂತ್ರಿಗಳ ಹತ್ತಿರ ಕೂಡ ನಾನು ಮಾತನಾಡಿದ್ದೆ. ಅವರ ಹತಿರ ಮಾತನಾಡಿದಾಗ ಆದಷ್ಟು ಬೇಗ ಅವರೊಂದಿಗೆ ಮಾತನಾಡಿ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದರು. ಅದರ ಬಗ್ಗೆ ಮಾತನಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಉಪನ್ಯಾಸಕರು ಕಾಲೇಜುಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಸುಮಾರು 200-300 ಜನರು ಇದ್ದಾರೆ. ಆದಷ್ಟು ಬೇಗ ಅವರಿಗೆ ಸಹಾಯ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾಜಿ ಮುಖ್ಯಮಂತ್ರಿ ವೀರೇಂದ್ರಪಾಟೀಲರ ಮನೆಗೆ ಬೆಂಕಿ ಬಿದ್ದಿರುವ ಬಗ್ಗೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ರಾಮಸ್ವಾಮಿಗಳಿಗೆ ಹಿಂದೆ ಇದ್ದಂಥ ಕಳಕಳಿ ಇಲ್ಲ. ಈ ರೀತಿಯೆಲ್ಲ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು : ಯಾಡಿಯೂರಪ್ಪನವರೇ, ತಾವು ಕುಳಿತುಕೊಳ್ಳಿ. ಅವರು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿದ್ದಾರೆ. ನಾನು ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅವರು ಹೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾಳೆಯಾದರೂ ಒಂದು ಸ್ಟೇಟ್‌ಮೆಂಟ್ ಮಾಡಿಸಿ ಸ್ವಾಮಿ.

ಅಧ್ಯಕ್ಷರು : ಹೇಳಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರೇಂದ್ರಪಾಟೀಲರ ಮನೆಗೆ ಬೆಂಕಿ ಬಿದ್ದ ಬಗ್ಗೆ .....

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ನಾಳೆಯಾದರೂ ಆಗುತ್ತದೆಯೇ ಸ್ವಾಮಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಗೆ ಮಾನ್ಯ ಸದಸ್ಯರುಗಳು ಹೇಳಿದ ವಿಷಯವನ್ನು ತಿಳಿಸುತ್ತೇನೆ. ಅವರು ನಾಳೆ ಇರುತ್ತಾರೋ ಇಲ್ಲವೋ ಎಂದು ಗೊತ್ತಿಲ್ಲ. ನಾಳೆಯೇ ಕೊಡುತ್ತೇವೆ ಎಂದು ನೀವು ಹೇಳಿದ್ದೀರಿ ಎಂದು ನೀವು ನನ್ನ ಬಗ್ಗೆ ಆಕ್ಷೇಪ ಮಾಡುತ್ತೀರಿ. ಒಂದು ಹೇಳಿಕೆಯನ್ನು ಕೊಡುವಂತೆ ಅವರಿಗೆ ತಿಳಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಮಂತ್ರಿಗಳು ನಾಳೆ ಇರುತ್ತಾರೋ ಇಲ್ಲವೋ ಎಂದು ಹೇಳದಿದ್ದರೆ ನಮಗೆ ಗೊತ್ತಾಗುವುದು ಹೇಗೆ?

ವಿಷಯ : ಮಾಜಿ ಮುಖ್ಯಮಂತ್ರಿಗಳಾದ ವೀರೇಂದ್ರಪಾಟೀಲರ ಮನೆಗೆ ಬೆಂಕಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಮಾನ್ಯ ವೀರೇಂದ್ರಪಾಟೀಲರ ಮನೆಗೆ ಬೆಂಕಿ ಒಂದು ಹಚ್ಚುವಂಥ ಘಟನೆ ನಡೆಯಿತು. ಆ ಒಂದು ಘಟನೆ ನಡೆದಾಗ ಪಾಟೀಲರ ಪೋಲೀಸ್ ಮ್ಯಾನ್‌ಗನ್ ಸಹಿತ ಅಲ್ಲಿಯೇ ಇದ್ದರು. ಅವರು ಅಲ್ಲೇ ಇದಾಗ ಈ ರೀತಿಯ ಒಂದು ಬೆಂಕಿ ಹಚ್ಚುವಂಥ ಒಂದು ಘಟನೆ ನಡೆಯಿತು. ನಿಜವಾಗಿಯೂ ಇದು ಯಾರಿಗೂ ಶೋಭೆ ತರುವಂಥದ್ದಲ್ಲ ಎಂದು ನಾನು ತಮ್ಮ ಮುಂದೆ ಹೇಳುತ್ತಿದ್ದೇನೆ. ಏಕೆಂದರೆ ಇವತ್ತಿನ ದಿವಸ ಇದೊಂದು ಸಾಮಾನ್ಯ ಘಟನೆ ಎಂದು ನಾವು ತಿಳಿಯಬಾರದು. ಅವರು ಮುಖ್ಯಮಂತ್ರಿಗಳಾಗಿದ್ದರು. ನಮ್ಮ ರಾಜ್ಯದ ನಾಯಕರು, ಅವರು ಅನಾರೋಗ್ಯದಲ್ಲಿರುವಂಥ ಕಾಲದಲ್ಲಿ ಒಬ್ಬರು ಬಂದು ಬೆಂಕಿ ಹಚ್ಚುತ್ತಾರೆ ಎಂದರೆ, ಇದು ಸರ್ಕಾರದವರು ಅವರಿಗೆ ಯಾವುದೇ ಒಂದು ಸೆಕ್ಯುರಿಟಿ ಕೊಟ್ಟಿಲ್ಲ ಎಂದರೆ, ಇದು ಸರ್ಕಾರಕ್ಕೆ ಶೋಭೆ ತರುವಂಥದಲ್ಲ. ಇದು ಕನ್ನಡ ನಾಡಿಗೂ ಕೂಡ ಶೋಭೆ ತರುವಂಥದ್ದಲ್ಲವೆಂದು ನಾನು ತಮಗೆ ಹೇಳುತ್ತೇನೆ. ಏಕೆಂದರೆ ಇದೇ ರೀತಿ ಬೇರೆಯವರಿಗೆ ಸಹಿತ ಆಗಬಹುದು. ಅದು ಬಹಳ ಮುಖ್ಯ ಇದೆ. ಇವತ್ತಿನ ದಿವಸ ವೀರೇಂದ್ರಪಾಟೀಲರಿಗೆ ಆಯಿತು. ಮತ್ತೆ ನಾಳೆ ಮತ್ತೊಬ್ಬರಿಗೆ ಆಗಬಹುದು. ಇಂಥ ಘಟನೆ ಮುಂದೆ ಆಗಬಾರದು ಎಂದು ನೋಡುವುದು ಸರ್ಕಾರದ ಆದ್ಯ ಕರ್ತವ್ಯ ಎಂದು ತಮ್ಮ ಮುಂದೆ ನಾನು ಹೇಳುತ್ತಿದ್ದೇನೆ. ಏಕೆಂದರೆ ಆತನನ್ನು ಕೋರ್ಟಿನಲ್ಲಿ ಹಾಜರ್ ಮಾಡಿದ್ದಾರೆ. ಜಾಮೀನು ಮೇಲೆ ಬರಬಹುದು. ಜಾಮೀನು ಮೇಲೆ ಬಂದನಂತರ ಮತ್ತೆ ಯಾವುದೇ ರೀತಿಯಲ್ಲಿ ಅಹಿತಕರವಾದಂಥ ಘಟನೆಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ ಎಂದು ಹೇಳುತ್ತೇನೆ. ನಾನು ಶ್ರೀಮಾನ್ ವೀರೇಂದ್ರಪಾಟೀಲರಿಗೆ ಸೆಕ್ಯುರಿಟಿಯನ್ನು ಕೊಡಬೇಕು ಎಂದು ಹೇಳುತ್ತೇನೆ. ಅವರಿಗೆ ಯಾವುದೇ ರೀತಿಯಿಂದ ಕೂದಲು ಕೊಂಕದ ಹಾಗೆ ಸರ್ಕಾರ ನೋಡಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರದ ಹೈ ಹ್ಯಾಂಡ್‌ನಿಂದ ಇವತ್ತಿನ ದಿವಸ ಇದು ಆಗಿದೆ. ಇದರಲ್ಲಿ ಸರ್ಕಾರದವರು ತಪ್ಪಿದ್ದಾರೆ. ಈ ರೀತಿ ಮುಂದೆ ಆದರೆ ಕನ್ನಡ ನಾಡಿನ ಜನ ಸಹಿಸಲಿಕ್ಕಿಲ್ಲ ಎಂಬ ಮಾತನ್ನು ತಮಗೆ ಹೇಳುತ್ತಿದ್ದೇನೆ.

* ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೇ, ಇದು ಯಾವ ಉದ್ದೇಶಕ್ಕೋಸ್ಕರ ಆಯಿತೆಂದು ಪತ್ರಿಕೆಗಳಲ್ಲಿ ನೋಡಿದ್ದೇವೆ. ಯಾರೋ ಒಬ್ಬರು ಕೆಲಸ ಕೇಳುವುದಕ್ಕೆ ಹೋಗಿದ್ದ. ಕೆಲಸ ಸಿಗಲಿಲ್ಲ ಎಂದು ಹೇಳಿ ಈ ರೀತಿ ಕೃತ್ಯ ನಡೆಸಿದ್ದಾನೆ. ಇದರ ಹಿನ್ನೆಲೆ ಏನು, ಇದರ ಹಿಂದೆ